ನಾವು ಆ ಹಬ್ಬದ ದಿನದಂದು ದೊಡ್ಡಪ್ಪನ ಮನೆಗೆ ಹೋಗಿ ಪೂಜೆ ಮಾಡಿ ಬರುತ್ತಿದ್ದೆವು.

ನಾನು ಹತ್ತನೆಯ ತರಗತಿಯನ್ನು ನಮ್ಮ ಕಾನ್ವೆಂಟಿಗೆ ಅತೀ ಹೆಚ್ಚು ಅಂಕ ಗಳಿಸಿ ಅತ್ಯುನ್ನತ ದರ್ಜೆಯಲ್ಲಿ ಪಾಸಾದದ್ದು ಅಮ್ಮನಿಗೆ ತನ್ನ ಶ್ರಮ ಸಾರ್ಥಕವಾಯಿತು ಎಂದು ಅನಿಸಿರಬೇಕು. ಅವಳು ಅತೀವ ಸಂತೋಷ ಮತ್ತು ಹೆಮ್ಮೆಯಿಂದ ಆ ವಿಷಯವನ್ನು ಆ ದಿನಪೂರ್ತಿ ಫೋನು ಮಾಡಿ ಎಲ್ಲಾ ನೆಂಟರಿಷ್ಟರೊಂದಿಗೆ, ಪರಿಚಯದವರೊಂದಿಗೆ ಹಂಚಿಕೊಂಡಳು. ಆದರೆ ಅಮ್ಮನಿಗೆ ನನ್ನನ್ನು ದೊಡ್ಡ ಡಾಕ್ಟರಾಗಿಯೋ, ಎಂಜಿನಿಯರಾಗಿಯೋ ಮಾಡಬೇಕೆಂಬ ಮಹದಾಸೆಗಳೇನೂ ಇರಲಿಲ್ಲ. ನನ್ನ ಮಗ ಒಂದು ಡಿಗ್ರಿ ಪಡೆದು ಮದುವೆ ಮಾಡಿಕೊಂಡು, ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಿಕೊಂಡು ಇರುವ ಆಸ್ತಿಯನ್ನು ಉಳಿಸಿಕೊಂಡು ಹೋದರೆ ಸಾಕು ಎನ್ನುವ ಆಶಯ ಅವಳದಾಗಿತ್ತು. ಅದರಿಂದಾಗಿ ನಾನು ನಮ್ಮ ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಕಾಮರ್ಸ್ ಆಯ್ಕೆ ಮಾಡಿಕೊಂಡು ಪ್ರಥಮ ಪಿಯುಸಿಗೆ ಸೇರಿದೆ. ನನ್ನ ಹತ್ತನೆಯ ತರಗತಿಯ ಉತ್ತಮ ಫಲಿತಾಂಶದಿಂದ ಖುಷಿಯಾಗಿದ್ದ ಅಮ್ಮ ನಾನು ಕೇಳದೆ ಹೋದರೂ ನನಗೊಂದು ಮೊಬೈಲ್ ಮತ್ತು ಮೋಟಾರು ಬೈಕ್ ಕೊಡಿಸಿದಳು. ನನ್ನ ಬಳಿ ಚಾಲನಾ ಪರವಾನಗಿ ಇಲ್ಲದಿದ್ದರ ಕಾರಣ ಬೈಕನ್ನು ಕಾಲೇಜಿಗೆ ಹೋಗಿ ಬರಲು ಮಾತ್ರ ಉಪಯೋಗಿಸಬೇಕಾಗಿತ್ತು. ಬೇರೆಲ್ಲಿಯೂ ತೆಗೆದುಕೊಂಡು ಹೋಗುವಂತಿಲ್ಲ ಎಂದು ಕಟ್ಟಪ್ಪಣೆ ಮಾಡಿದ್ದಳು.

ನಾನು ಸರ್ಕಾರಿ ಜೂನಿಯರ್ ಕಾಲೇಜಿಗೆ ಸೇರಿದ ಮೇಲೆ ನನಗೊಂದು ಆಶ್ಚರ್ಯ ಕಾದಿತ್ತು. ಹತ್ತನೆಯ ತರಗತಿಯನ್ನು ಪಾಸಾಗಿದ್ದ ಹೇಮಾ ಕೂಡ ಅದೇ ಕಾಲೇಜಿನ ಕಾಮರ್ಸ್ ವಿಭಾಗಕ್ಕೆ ಪ್ರಥಮ ಪಿಯುಸಿಗೆ ಸೇರಿದ್ದಳು. ಒಂದೇ ಬೇಸರದ ಸಂಗತಿ ಎಂದರೆ ನಮ್ಮ ಸೆಕ್ಷನ್ನುಗಳು ಬೇರೆ ಬೇರೆಯಾಗಿದ್ದವು. ಆದರೂ ನನಗೆ ಪ್ರತಿದಿನ ಕಾಲೇಜಿನ ಸಮಯದಲ್ಲಿ ಅವಳನ್ನು ನೋಡಲು ಅವಕಾಶ ದೊರಕಿತು. ಅವಳು ಅವಳ ಸೆಕ್ಷನ್ನಿನ ಹುಡುಗಿಯರೊಂದಿಗೆ ನಗುತ್ತಾ ಕಾಲೇಜಿಗೆ ಬರುವುದನ್ನು ಮತ್ತು ಹೋಗುವುದನ್ನು ದಿನವೂ ವೀಕ್ಷಿಸುತ್ತಿದ್ದೆ. ಆದರೆ ಅವಳು ನನ್ನನ್ನು ಕಂಡೊಡನೆಯೇ ತಲೆತಗ್ಗಿಸಿಕೊಂಡು ನಡೆದು ಬಿಡುತ್ತಿದ್ದುದು ಯಾಕೆಂದು ತಿಳಿಯುತ್ತಿರಲಿಲ್ಲ. ಪರಿಚಯದವನೆಂದೋ, ನೆಂಟರ ಮಗನೆಂದೋ ಅಥವಾ ವಯಸ್ಸಿನ ಸಹಜ ನಾಚಿಕೆಯೋ ಆಗಿರಬೇಕು. ಆದರೆ ಅವಳು ಯಾವ ಹುಡುಗನೊಂದಿಗೂ ಸ್ನೇಹ ಬೆಳೆಸದೇ ಇದ್ದುದು ಕಂಡು ನನಗೆ ಸಮಾಧಾನವಾಗಿತ್ತು. ಹೇಗಾದರೂ ಮಾಡಿ ನನ್ನ ಪ್ರೀತಿಯನ್ನು ಅವಳಲ್ಲಿ ನಿವೇದಿಸಿಕೊಳ್ಳಬೇಕೆನ್ನುವ ಹಂಬಲ ಹೆಚ್ಚಾಯಿತು. ಅದನ್ನು ವ್ಯಕ್ತಪಡಿಸುವುದು ಹೇಗೆ ಎನ್ನುವ ಚಿಂತೆ ಶುರುವಾಯಿತು. ಪತ್ರ ಬರೆಯುವುದೋ..? ಅವಳನ್ನು ಏಕಾಂತದಲ್ಲಿ ಭೇಟಿಯಾಗಿ ನಿನ್ನನ್ನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ ಎಂದು ನೇರವಾಗಿ ತಿಳಿಸುವುದೋ..? ಯಾವುದೂ ತೋಚಲಿಲ್ಲ ಮತ್ತು ಯಾವುದಕ್ಕೂ ಧೈರ್ಯ ಸಾಲಲಿಲ್ಲ. ಮೊಬೈಲಿನಿಂದ ಮೆಸೇಜು ಕಳಿಸೋಣವೆಂದರೆ ಅವಳ ಬಳಿ ಮೊಬೈಲ್ ಫೋನು ಇರಲಿಲ್ಲ. ಆದರೂ ಎಂದಾದರೊಂದು ದಿನ ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದರೆ ಖಂಡಿತಾ ನಿರಾಕರಿಸಲಾರಳು ಎನ್ನುವ ಆತ್ಮವಿಶ್ವಾಸ ನನ್ನದಾಗಿದ್ದಿತು.

ನಾನು ಹೇಮಾಳನ್ನು ಪ್ರೀತಿಸುತ್ತಿರುವ ವಿಷಯವನ್ನು ಅಮ್ಮನ ಬಳಿಯಲ್ಲಾದರೂ ಹೇಳಿಕೊಳ್ಳೋಣವೆಂದರೆ ಯಾಕೋ ಏನೋ ಹಿಂಜರಿಕೆಯಾಗುತಿತ್ತು. ಹೇಮಾಳ ತಂದೆ ನಮ್ಮ ಮನೆಗೆ ಬರುತ್ತಿದ್ದರು. ಅಮ್ಮನೊಡನೆ ಅಕ್ಕಾ ಎಂದು ಆತ್ಮೀಯವಾಗಿ ಮಾತನಾಡುತ್ತಿದ್ದರು. ಅಮ್ಮ ಹೇಮಾಳನ್ನು ನೋಡಿದ್ದಾಳೆ. ಮಾತನಾಡಿಸಿದ್ದಾಳೆ. ಅವಳು ಚೆಲುವೆ, ಒಳ್ಳೆಯ ಗುಣದವಳು ಎಂಬುದು ಅಮ್ಮನಿಗೆ ತಿಳಿದಿದೆ. ಆದರೂ ಒಂದು ದಿನವಾದರೂ ಅಮ್ಮ ಹೇಮಾಳ ಬಗ್ಗೆ ಒಳ್ಳೆಯ ಹುಡುಗಿ, ಲಕ್ಷಣವಾಗಿದ್ದಾಳೆ ಎಂದು ಬಾಯಿ ಮಾತಿಗಾದರೂ ನನ್ನೊಂದಿಗೆ ಮಾತನಾಡಿಲ್ಲ. ಒಟ್ಟಿನಲ್ಲಿ ಹೇಮಾ ಅಮ್ಮನ ಮನಸ್ಸಿನಲ್ಲಿ ಇಲ್ಲವೆಂಬುದು ನನಗೆ ದೃಢವಾಗಿತ್ತು. ಯಾಕೆ? ಅಮ್ಮನಿಗೆ ಹೇಮಾಳ ಕುಟುಂಬದ ಬಡತನ ಎದ್ದು ಕಾಣುತಿತ್ತೇ..? ಅಮ್ಮ ತನ್ನ ಅಂತಸ್ತಿಗೆ ತಕ್ಕನಾದ ಸೊಸೆಯನ್ನು ಹುಡುಕಿ ತರಬೇಕೆಂದು ನಿರ್ಧರಿಸಿಕೊಂಡಿದ್ದಾಳೆಯೇ..? ಅಥವಾ ಅಮ್ಮನ ಮನಸ್ಸಿನಲ್ಲಿ ಬೇರೆ ಯಾರಾದರೂ ಇದ್ದರೋ..? ಅಥವಾ ಇನ್ನೂ ಅವುಗಳನ್ನೆಲ್ಲಾ ಮಾತನಾಡಲು ನನ್ನ ಮಗನದ್ದು ಚಿಕ್ಕ ವಯಸ್ಸು ಎಂದು ಇರಬಹುದಾ..? ಏನೊಂದೂ ತಿಳಿಯುತ್ತಿರಲಿಲ್ಲ. ಆದರೆ ನಾನಾಗಿಯೇ ನನ್ನ ಪ್ರೀತಿಯ ವಿಷಯವನ್ನು ಅಮ್ಮನಿಗೆ ತಿಳಿಸಿ ಅವಳು ಅದನ್ನು ಒಪ್ಪದೇ ಹೋದರೆ ಎನ್ನುವ ಭಯವೂ ನನ್ನನ್ನು ಕಾಡತೊಡಗಿತ್ತು. ಸಮಯ ಬರಲಿ, ಮೊದಲು ಹೇಮಾಳಿಗೆ ನಾನು ಅವಳನ್ನು ಪ್ರೀತಿಸುತ್ತಿರುವ ವಿಷಯ ತಿಳಿಸಿ ಆಮೇಲೆ ಹೇಗಾದರೂ ಮಾಡಿ ಅಮ್ಮನನ್ನು ಒಪ್ಪಿಸೋಣ ಎಂದು ನಾನು ಅದಕ್ಕಾಗಿ ತಾಳ್ಮೆಯಿಂದ ಕಾಯತೊಡಗಿದೆ.

ಮನುಷ್ಯನ ಜೀವನ ಹುಟ್ಟಿನಿಂದ ಸಾವಿನವರೆಗೆ ಸುಖದುಃಖಗಳ ಸಮ್ಮಿಶ್ರಣ. ಎಂದೆಂದೂ ಸುಖದ ಹಾದಿಯನ್ನು ಅರಸುತ್ತಾ ನಡೆಯುವ ನಮಗೆ ವಿಧಿ ಎಲ್ಲೋ ತಿರುವುಗಳಲ್ಲಿ ದಿಢೀರನೆ ದುಃಖದ ದರ್ಶನ ಮಾಡಿಸುತ್ತದೆ. ಆಗ ನಾವು ಮುಂದಿನ ದಾರಿ ಕಾಣದೆ ಕಂಗಾಲಾಗುತ್ತೇವೆ. ಚಿಂತೆಯಿಂದ ಬಸವಳಿದು ಕರಗಿ ಹೋಗುತ್ತೇವೆ. ನಾನು ಆಗ ಎರಡನೆಯ ಪಿಯುಸಿಯ ಕೊನೆಯ ಹಂತದಲ್ಲಿದ್ದೆ. ಹೇಮಾ ಎರಡು ದಿನ ಕಾಲೇಜಿನಲ್ಲಿ ಎಲ್ಲೂ ಕಾಣಿಸಲಿಲ್ಲ. ಮೊದಲ ದಿನ ನನಗೆ ಏನೂ ಅನಿಸಲಿಲ್ಲ. ಎರಡನೆಯ ದಿನ ನನಗೆ ತುಸು ಆತಂಕವಾಯಿತು. ಯಾವುದೋ ನೆಂಟರ ಮನೆಯ ಮದುವೆಯೋ ಸಮಾರಂಭವೋ ಇರಬೇಕು. ಅಲ್ಲಿಗೆ ಹೋಗಿರಬಹುದು ಎಂದು ನನ್ನನ್ನು ನಾನೇ ಸಮಾಧಾನ ಮಾಡಿಕೊಂಡೆ. ಸಂಜೆ ಮನೆಗೆ ಹೋದ ಮೇಲೆ ತಾರಸಿ ಮೇಲೆ ಹೋಗಿ ನಿಂತು ನೋಡಿದೆ. ಅವರ ಮನೆಯ ಬಳಿ ಅವಳಾಗಲೀ, ಅವರ ತಂದೆತಾಯಿಯಾಗಲೀ ಕಾಣಿಸಲಿಲ್ಲ. ನಾನು ಅಂದುಕೊಂಡಿರುವುದು ನಿಜವಿರಬಹುದು. ಎಲ್ಲೋ ಹೋಗಿರಬಹುದು ಎಂದುಕೊಂಡೆ. ಮೂರನೆಯ ದಿನವೂ ಅವಳು ಕಾಲೇಜಿನಲ್ಲಿ ಕಾಣಿಸಲೇ ಇಲ್ಲ. ನನಗೆ ಒಳಗೊಳಗೇ ತಳಮಳವಾಯಿತು. ಅಂದು ಕಾಲೇಜಿನಿಂದ ಮನೆಗೆ ಬಂದಾಗ ಹೇಮಾಳ ತಂದೆಗೆ ಪ್ಯಾರಲಿಸಿಸ್ ಆಗಿದೆಯೆಂತೆ ಎಂದು ಅಮ್ಮ ತಿಳಿಸಿದಳು. ಅವರ ಮನೆಯ ಸಾಲಿನಲ್ಲಿಯೇ ಇದ್ದ ನಮ್ಮ ಮನೆಯ ಕೆಲಸದ ಹೆಂಗಸು ಅಮ್ಮನಿಗೆ ತಿಳಿಸಿದಳಂತೆ. ನನಗೆ ವಿಷಯ ತಿಳಿದು ಅತೀವ ಬೇಸರವಾಯಿತು. ಅಂದು ಸಂಜೆ ಅಮ್ಮ ನನ್ನನ್ನು ಕರೆದುಕೊಂಡು ಅವರ ಮನೆಗೆ ಹೋದಳು. ಅವರ ಅಮ್ಮನಿಗೆ ಭರವಸೆ ತುಂಬುವ ಪ್ರಯತ್ನ ಮಾಡಿದಳು. ಎಂದೆಂದೂ ಮಂದಹಾಸ ತುಂಬಿರುತಿದ್ದ ಹೇಮಾಳ ಮುಖ ಬಾಡಿ ಬತ್ತಿಹೋಗಿತ್ತು. ಅಂತರ್ಮುಖಿಯಾಗಿದ್ದ ನಾನು ಅವಳಿಗೆ, ಅವರ ತಾಯಿಗೆ ಒಂದೆರಡು ಸಾಂತ್ವನದ ಮಾತುಗಳನ್ನು ಹೇಳಲೂ ಸಾಧ್ಯವಾಗಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ಅವರ ತಂದೆಯನ್ನು ನೋಡುವ ಸಲುವಾಗಿ ಅವರ ಮನೆಗೆ ಹೋಗಿ ಬರುವ ಅವಕಾಶವಂತೂ ನನಗೆ ಸಿಕ್ಕಿತು.

ಪಿಯುಸಿ ಮುಗಿದ ಮೇಲೆ ನಾನು ಬಿಕಾಂ ಪದವಿಗಾಗಿ ನಮ್ಮೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸೇರಿದೆ. ಹೇಮಾ ತನ್ನ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ತನ್ನ ತಾಯಿಗೆ ಆಸರೆಯಾಗಿ ನಿಂತಳು. ಅದಾದ ನಂತರ ಅವಳು ತುಂಬಾ ದಿನ ಊರಿನಲ್ಲಿ ಕಾಣಿಸಲಿಲ್ಲ. ಒಂದು ದಿನ ಅಮ್ಮನೊಂದಿಗೆ ಅವರ ತಂದೆಯವರನ್ನು ನೋಡಲು ಹೋದಾಗ ಅವಳು ಬೆಂಗಳೂರಿನ ಗಾರ್ಮೆಂಟ್ಸ್ ಫ್ಯಾಕ್ಟರಿಯೊಂದರಲ್ಲಿ ಕೆಲಸಕ್ಕೆ ಸೇರಿದ ವಿಷಯವನ್ನು ಅವರ ತಾಯಿ ತಿಳಿಸಿದರು. ನನಗೆ ತೀವ್ರ ಬೇಸರವಾಯಿತು. ಆದರೆ ನಾನು ಏನೂ ಮಾಡುವಂತಿರಲಿಲ್ಲ. ಅವಳ ನೆನಪಿನಲ್ಲಿಯೇ ದಿನಗಳನ್ನು ಕಳೆಯತೊಡಗಿದೆ. ಅವಳು ಎಂದಾದರೊಂದು ದಿನ ಊರಿನಲ್ಲಿ ಕಾಣಿಸಿಕೊಂಡಾಗ ನಾನು ಅವಳನ್ನು ಪ್ರೀತಿಸುತ್ತಿರುವ ವಿಷಯವನ್ನು ಹೇಗಾದರೂ ಮಾಡಿ ಅವಳಿಗೆ ತಿಳಿಸಿ ಬಿಡಬೇಕು ಎಂದು ಏನೇನೋ ಯೋಜನೆಗಳನ್ನು ಹಾಕಿಕೊಳ್ಳತೊಡಗಿದೆ. ಆದರೆ ಅವು ಯಾವುದೂ ಸಫಲವಾಗಲಿಲ್ಲ. ಆದರೆ ನನ್ನ ಹೃದಯದಲ್ಲಿ ಅವಳಿಗಾಗಿ



## ದೋಷ

ಸಿಗುವ ಒಬ್ಬೊಬ್ಬರಲ್ಲೂ
ದೋಷ ಹುಡುಕುತ್ತಾ
ದೂರ ಮಾಡಿದರೆ.
ಉಳಿದು ಬಿಡುವೆ, ಕೊನೆಗೆ
ಏಕಾಂಗಿಯಾಗಿ.
ಯಾರ ಬಳಿ ಇರದೆ

★ ದ್ವಾರನಕುಂಟೆ ಪಾತಣ್ಣ